**ಹೆಚ್ಚುವರಿ ಸಿವಿಲ್ ಜಡ್ಜ ಮತ್ತು ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಭಟ್ಕಳ.**

**ಸಿ. ಸಿ. ನಂಬರಃ 128/2025**

**ಫಿರ್ಯಾದುದಾರರು** ದಿ. ಜನತಾ ಕೋ-ಅಪರೇಟಿವ್ ಕ್ರೆಡಿಟ್ ಸೊಸೈಟಿ, ಲಿಮಿಟೆಡ್,
ಭಟ್ಕಳ , ಕಾರ್ ಸ್ಟ್ರೀಟ್, ಶಾಖೆ, ಭಟ್ಕಳ ತಾಲೂಕು.
ಪ್ರತಿನಿಧಿಸುವವರು, ಇದರ ವ್ಯವಸ್ಥಾಕರು,
ಶ್ರೀ ವಿನೋದ ತಂದೆಃ ಮಂಜುನಾಥ ನಾಯ್ಕ,

**- ವಿರುದ್ಧ -**

**ಆರೋಪಿತರು** ಶ್ರೀ ಶಂಕರ ತಿಮ್ಮಪ್ಪ ನಾಯ್ಕ

**ಭಾರತೀಯ ನ್ಯಾಯ ಸಂಹಿತೆ ಕಲಂ.351 ರ ಅಡಿಯಲ್ಲಿ ಆರೋಪಿಯ ಹೇಳಿಕೆಃ-**

ಪ್ರಶ್ನೆ-1 : ಈ ಪ್ರಕರಣದಲ್ಲಿ ಪಿರ್ಯಾದುದಾರ ಸಾಕ್ಷಿದಾರರು ನುಡಿದ ಸಾಕ್ಷ್ಯವನ್ನು ಕೇಳಿದ್ದೀರಾ?

ಉತ್ತರ : ಹೌದು

ಪ್ರಶ್ನೆ-2 : ಚಾಸಾ-1/ಪ್ರಾಸಾ-1 ವಿನೋದ ಮಂಜುನಾಥ ನಾಯ್ಕ, ರವರು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯಾದ ನೀವು ದಿನಾಂಕಃ 10-05-2022 ರಂದು ಪಿರ್ಯಾದಿ ಸಂಸ್ಥೆಯಿಂದ ರೂ.1,00,000/- (ರೂಪಾಯಿ ಒಂದು ಲಕ್ಷ ಮಾತ್ರ) ಹಣವನ್ನು ಕ್ಯಾಶ್ ಕ್ರೆಡಿಟ್ ಸಾಲವಾಗಿ ಸಾಲದ ಖಾತೆ ಸಂಖ್ಯೆ CC-1357 ರಲ್ಲಿ ಶೇಕಡಾ 15% ವಾರ್ಷಿಕ ಬಡ್ಡಿ ದರದಲ್ಲಿ ಪಡೆದುಕೊಂಡಿದ್ದು ಇರುತ್ತದೆ. ಆದರೆ ಒಪ್ಪಿಕೊಂಡಂತೆ ಪ್ರದ್ರಿ ಸಾಲವನ್ನು ಅವಧಿಯೊಳಗೆ ಮಾಡಿದ್ದು ಇರುವುದಿಲ್ಲ ಎಂದು ಈ ಬಗ್ಗೆ ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುತ್ತೀರಿ?

ಉತ್ತರ : ಸುಳ್ಳು

ಪ್ರಶ್ನೆ-3 : ಪ್ರಾ.ಸಾ.1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 15-10-2024 ರ ತನಕ ಅಸಲು ಬಡ್ಡಿ ಸೇರಿ ಒಟ್ಟೂ ರೂ. 1,25,500/-( ಒಂದು ಲಕ್ಷದ ಇಪ್ಪತ್ತೈದು ಸಾವಿರ ಐದುನೂರು ಮಾತ್ರ) ಬಾಕಿ ಇರುತ್ತದೆ. ನಂತರ ಪ್ರದ್ರಿ ಸಾಲದ ಹಣವನ್ನು ಪಿರ್ಯಾದಿಯವರು ಮರುಪಾವತಿ ಮಾಡುವಂತೆ ಕೇಳಿಕೊಂಡಾಗ ಮರುಪಾವತಿ ಮಾಡುವ ಸಲುವಾಗಿ ನೀವು ಫೆಡರಲ್ ಬ್ಯಾಂಕ್ ಲಿಮಿಟೆಡ್, ಭಟ್ಕಳ ಶಾಖೆಯ ಚೆಕ್ ನಂಬರ್ 0736271 ನ್ನು 1,25,500/-( ಒಂದು ಲಕ್ಷದ ಇಪ್ಪತ್ತೈದು ಸಾವಿರ ಐದುನೂರು ಮಾತ್ರ) ಕ್ಕೆ ದಿನಾಂಕಃ 15-10-2024 ಎಂದು ನಮೂದಿಸಿ ಚೆಕ್ ನ್ನು ನಿಪಿ-2 ರಂತೆ ಫಿರ್ಯಾದಿದಾರರಿಗೆ ನೀಡಿರುತ್ತೀರಿ ಎಂದು ಈ ಬಗ್ಗೆ ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುತ್ತೀರಿ?

ಉತ್ತರ : ಸುಳ್ಳು

| | | |
|---|---|---|
| ಪ್ರಶ್ನೆ-4 | : | ಫ್ರಾ.ಸಾ.1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಸದ್ರಿ ಚೆಕ್ಕನ್ನು ಫಿರ್ಯಾದಿ ಸೊಸೈಟಿಯವರು ದಿ.ಭಟ್ಕಳ ಅರ್ಬನ್ ಕೋ-ಅಪರೇಟಿವ್ ಲಿಮಿಟೆಡ್, ಭಟ್ಕಳ ಶಾಖೆಯಲ್ಲಿ ನಗಧೀಕರಣಕ್ಕಾಗಿ ಹಾಜರಪಡಿಸಿದಾಗ,"Funds Insufficient" ಎಂಬ ಹಿಂಬರಹದೊಂದಿಗೆ ಅಮಾನ್ಯಗೊಂಡು ನಿಪಿ-3 ರಂತೆ ದಿನಾಂಕಃ 18-10-2024 ರಂದು ವಾಪಸ್ಸು ಬಂದಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುತ್ತೀರಿ? |
| ಉತ್ತರ | : | ಸುಳ್ಳು |
| ಪ್ರಶ್ನೆ-5 | : | ಫ್ರಾ.ಸಾ.1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಫಿರ್ಯಾದಿದಾರರು ದಿನಾಂಕಃ 09-11-2024 ರಂದು ತಮ್ಮ ವಕೀಲರ ಮೂಲಕ ಲೀಗಲ್ ನೋಟಿಸನ್ನು ನಿಪಿ-4 ರಂತೆ ರಿಜಿಸ್ಟರ್ ಅಂಚೆ ಮುಖಾಂತರ ನಿಮಗೆ ಕಳುಹಿಸಿದ್ದು, ಸದ್ರಿ ಚೆಕ್ಕಿನಲ್ಲಿ ನಮೂದಿಸಿರುವ ಹಣವನ್ನು ನೋಟಿಸು ತಲುಪಿದ 15 ದಿನಗಳೊಳಗೆ ಮರು ಮಾಡುವಂತೆ ತಿಳಿಸಿದ್ದು, ಸದ್ರಿ ನೋಟಿಸ್ಸನ್ನು ನೀವು ಸ್ವೀಕರಿಸದೇ ದಿನಾಂಕಃ 19-11-2024 ರಂದು Unclaimed ಎಂದು ನಿಪಿ-6 ರಂತೆ ವಾಪಸ್ಸು ಬಂದಿರುತ್ತದೆ. ಆದರೆ ಇಂದಿನವರೆಗೂ ನೀವು ಚೆಕ್ಕಿನ ಹಣವನ್ನು ಪಾವತಿ ಮಾಡದೆ ಆ ಮೂಲಕ ನೆಗೋಶಿಯೇಬಲ್ ಇನ್ಸ್ಟ್ರುಮೆಂಟ ಆಕ್ಟ ಕಲಂ 138 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವೆಸಗಿದ್ದೀರಿ ಎಂದು ಈ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿವೇನು ಹೇಳುತ್ತೀರಿ? |
| ಉತ್ತರ | : | ನೋಟಿಸ್ಸು ಬಂದಿಲ್ಲ. |
| ಪ್ರಶ್ನೆ-6 | : | ಈ ಮೊಕದ್ದಮೆಯಲ್ಲಿ ನೀವು ಬೇರೆ ಏನಾದರೂ ಹೇಳುವುದು ಇದೆಯಾ? |
| ಉತ್ತರ | : | ಇಲ್ಲ. |
| ಪ್ರಶ್ನೆ-7 | : | ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಅಥವಾ ಹಾಜರುಪಡಿಸಲು ದಾಖಲೆಗಳು ಏನಾದರೂ ಇದೆಯಾ? |
| ಉತ್ತರ | : | ಇದೆ |

(ಸಾಕ್ಷಿದಾರರ ಸಾಕ್ಷ್ಯವನ್ನು ಸಂಕ್ಷಿಪ್ತಗೊಳಿಸಿ ಆರೋಪಿತನಿಗೆ ತಿಳಿದಿರುವ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಲಾಗಿ ಸದ್ರಿ ಆರೋಪಿ ಹೇಳಿದ ಉತ್ತರಗಳನ್ನು ಯಥಾವತ್ತಾಗಿ ಬರೆದುಕೊಳ್ಳಲಾಯಿತೆಂದು ಈ ಮೂಲಕ ದೃಢೀಕರಿಸಲಾಗಿದೆ.)

**ಸಹಿ ಇದೆ/-**

**(ಶ್ರೀಮತಿ.ಧನವತಿ)**
ಹೆಚ್ಚುವರಿ ಸಿವಿಲ್ ಜಡ್ಜ ಮತ್ತು ನ್ಯಾಯಿಕ
ದಂಡಾಧಿಕಾರಿ, ಭಟ್ಕಳ.

ದಿನಾಂಕಃ 22-01-2026.